ಸಂಯುಕ್ತ ಕರ್ನಾಟಕ

## ■ ಜೈನ್ ಕಾಲೇಜಿನಿಂದ ಹೊಸ ಕೋರ್ಸ್

ನಗರದ ಜೈನ್ ಕಾಲೇಜಿನಲ್ಲಿ ಮೊದಲ ಬಾರಿಗೆ 'ಡೇಟಾ ಅನಾಲೇಟಿಕ್ಸ್' ಎಂಬ ಹೊಸ ಕೋರ್ಸನ್ನು 'ಪೆಲೀಸ್ಸಿಯನ್ ಬ್ರೌನ್' ಎಂಬ ಸಿಂಗಾಪುರ್ ಮೂಲದ ಕಂಪನಿಯ ಜೊತೆಗೂಡಿ ಪ್ರಾರಂಭಿಸುತ್ತಿದೆ.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಕಂಪನಿಯ ನಿರ್ದೇಶಕ ಕೃಷ್ಣ, ಭಾರತದಲ್ಲಿ ಮೊಟ್ಟ ಮೊದಲ ಬಾರಿಗೆ ಈ ಕೋರ್ಸನ್ನು ನಾವು ಪ್ರಾರಂಭಿಸುತ್ತಿದ್ದೇವೆ. ಈಗಿನ ಸ್ಪರ್ಧಾತ್ಮಕ ಯುಗದಲ್ಲಿ ವಿದ್ಯಾರ್ಥಿಗಳು ಎಷ್ಟು ಓದಿದರೂ ಅದು ಕಡಿಮೆ ಎಂದು ಎನಿಸುತ್ತಿರುತ್ತದೆ. ಅದಕ್ಕಾಗಿ ಅವರು ಏನಾದರೂ ಹೊಸ ವಿಷಯವನ್ನು ಕಲಿಯಬೇಕು ಎಂದು ಹಾತೊರೆಯುತ್ತಿರುತ್ತಾರೆ. ಅಂತಹವರಿಗೆ ಈ ಕೋರ್ಸ್ ತುಂಬಾ ಅನುಕೂಲಕಾರಿ ಎಂದು ಹೇಳಿದರು.

ಬಿಸಿಎ ಪದವಿ ಹಾಗೂ ಡಿಪ್ಲೋಮಾ ಕೋರ್ಸ್‌ಗಳಲ್ಲಿ ಈ ವಿಷಯವನ್ನು ಅಳವಡಿಸಲಾಗಿದೆ. ಬಿಕಾಂ ಮತ್ತು ಬಿಎಸ್ಸಿ ವಿದ್ಯಾರ್ಥಿಗಳೂ ಈ ಕೋರ್ಸ್ ಮಾಡಬಹುದು ಎಂದು ಅವರು ಹೇಳಿದರು.

ಈ ಕೋರ್ಸ್‌ಗೆ ಸಂಬಂಧಿಸಿದಂತೆ ಮೇ 31 ಹಾಗೂ ಜೂನ್ 14ರಂದು ಕಾರ್ಯಾಗಾರವನ್ನು ಜಯನಗರದ ಜೈನ್ ಕಾಲೇಜು ಸಭಾಂಗಣದಲ್ಲಿ ಹಮ್ಮಿಕೊಳ್ಳಲಾಗಿದೆ. ವಿದ್ಯಾರ್ಥಿಗಳು ತಮ್ಮ ಪಾಲಕರೊಂದಿಗೆ ಆಗಮಿಸಿ ಕೋರ್ಸ್ ಬಗ್ಗೆ ಮಾಹಿತಿ ಪಡೆದುಕೊಳ್ಳಬಹುದು ಎಂದು ತಿಳಿಸಿದರು.